

## ಬೆಟ್ಟಕ್ಕೆ ಕೇಬಲ್ ಕಾರ್

ಚಾಮುಂಡಿ ಬೆಟ್ಟದ ಅಭಿವೃದ್ಧಿಗೆ ಒಂದಿಲ್ಲೊಂದು ಯೋಜನೆ ರೂಪುಗೊಂಡರೂ ಯಾವುದೂ ಕಾರ್ಯರೂಪಕ್ಕೆ ಬರುತ್ತಿಲ್ಲ ಎಂಬುದಕ್ಕೆ 'ಕೇಬಲ್ ಕಾರ್' ಯೋಜನೆ ಸಾಕ್ಷಿಯಾಗಿದೆ. ಪ್ರವಾಸಿಗರನ್ನು ಸೆಳೆಯುವ ಸಲುವಾಗಿ ಹದಿನೈದು ವರ್ಷಗಳ ಹಿಂದೆ ಈ ಯೋಜನೆಯು ಪ್ರಸ್ತಾವವಾಗಿದ್ದರೂ ಇನ್ನೂ ಜಾರಿಯಾಗಿಲ್ಲ. ಬಜೆಟ್‌ನಲ್ಲಿ ಘೋಷಣೆಯಾಗಿದ್ದರೂ ಕಾರ್ಯರೂಪಕ್ಕೆ ಇಳಿದಿಲ್ಲ. 'ರೋಪ್‌ವೇ' ಎಂಬುದು ಈಗ ಹಗಲುಗನಸಿನಂತೆ ಕಾಣುತ್ತಿದೆ.

ಬೆಟ್ಟದ ತಪ್ಪಲಿನಲ್ಲಿ ರೋಪ್‌ವೇ ಕೇಂದ್ರ ಹಾಗೂ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗೆ ಜಮೀನು ಸಹ ನೀಡಲಾಗಿತ್ತು. ಸರ್ಕಾರದ ನಿರಾಸಕ್ತಿ, ಪರಿಸರವಾದಿಗಳ ವಿರೋಧ ಹಾಗೂ ನಿಗದಿ ಪಡಿಸಿದ ಜಮೀನಿನ ವಿವಾದಗಳಿಂದಾಗಿ ಯೋಜನೆ ಸ್ಥಗಿತಗೊಂಡಿದೆ.

ಬೆಟ್ಟಕ್ಕೆ ಚತುಷ್ಪಥ ರಸ್ತೆ ನಿರ್ಮಿಸುವುದಕ್ಕಿಂತ ಕೇಬಲ್ ಕಾರ್ ಯೋಜನೆ ಕಾರ್ಯರೂಪಕ್ಕೆ ಬಂದರೆ ಪರಿಸರದ ಹಾನಿಯ ಪ್ರಮಾಣ ಕಡಿಮೆ ಮಟ್ಟದಲ್ಲಿ ಇರುತ್ತದೆ ಎನ್ನುವುದು ಕೆಲವು ಪರಿಸರವಾದಿಗಳ ಒತ್ತಾಯ. ವಾಹನದಲ್ಲಿ ಬೆಟ್ಟ ತಲುಪಲು 15–20 ನಿಮಿಷ ಬೇಕಾಗುತ್ತದೆ. ವಾಯು ಮಾಲಿನ್ಯವೂ ಹೆಚ್ಚು. ಅದೇ ಕೇಬಲ್ ಕಾರಿನಲ್ಲಾದರೆ 5–10 ನಿಮಿಷದಲ್ಲಿ ಬೆಟ್ಟ ಸೇರಬಹುದು. ಪರಿಸರವನ್ನೂ ಸಂರಕ್ಷಿಸಬಹುದು. ಚಾಮುಂಡಿ ಬೆಟ್ಟದ ಹಸಿರು ಪರಿಸರವನ್ನು ಆಸ್ವಾದಿಸುತ್ತಲೇ ಬೆಟ್ಟಕ್ಕೆ ಹೋಗಿ ಬರಬಹುದು. ಇದರಿಂದ ಪ್ರವಾಸಿಗರ ಸಂಖ್ಯೆಯೂ ಹೆಚ್ಚಲಿದೆ. ಬೆಟ್ಟಕ್ಕೂ ಒಂದು ಮೆರುಗು ಬರುತ್ತದೆ. ಮೈಸೂರು ನಗರಕ್ಕೂ ಒಂದು ಕೋಡು ಮೂಡುತ್ತದೆ ಎಂಬ ಭಾವನೆ ಇದೆ. ಆದರೂ ಯೋಜನೆ ಸಾಕಾರಗೊಂಡಿಲ್ಲ, ಸದ್ಯಕ್ಕೆ ಕೇಬಲ್ ಕಾರ್ ಮೇಲೇಳುವ ಲಕ್ಷಣಗಳು ಕಾಣುತ್ತಿಲ್ಲ.

ಚಾಮುಂಡಿಯ ಹಲವು ರೂಪಗಳನ್ನು ಚಿತ್ರಿಸಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ದೇಗುಲವನ್ನು ಜೀರ್ಣೋದ್ಧಾರಮಾಡಿ ಮಹಾದ್ವಾರದ ಮೇಲೆ ದೊಡ್ಡ ಗೋಪುರ ನಿರ್ಮಿಸಿದ್ದಾರೆ. ಮರದಲ್ಲಿ ನಿರ್ಮಿಸಿದ ಸಿಂಹವಾಹನವನ್ನು ಬಳುವಳಿಯಾಗಿ ನೀಡಿದ್ದು, ಇದನ್ನು ರಥೋತ್ಸವ ಸಂದರ್ಭದಲ್ಲಿ ಬಳಸಲಾಗುತ್ತದೆ. ಗರ್ಭಗುಡಿಯಲ್ಲಿ ಎಂಟು ಭುಜಗಳನ್ನು ಹೊಂದಿರುವ ಚಾಮುಂಡೇಶ್ವರಿಯು ವಿರಾಜಮಾನಳಾಗಿದ್ದಾಳೆ.

ದೇಗುಲ ಪ್ರವೇಶಿಸಿದರೆ ಬಲಭಾಗದಲ್ಲಿ ಇರುವ ಗಣಪತಿಯ ಪುಟ್ಟ ಮೂರ್ತಿಗೆ ನಮಿಸಿ ಮೆಟ್ಟಿಲು ಏರಿದಂತೆ ಬಲಿಪೀಠ, ಧ್ವಜಸ್ತಂಭ ಇದೆ. ಪೀಠದ ಮೇಲೆ ದೇವಿಯ ಪಾದಗಳನ್ನು ಚಿತ್ರಿಸಲಾಗಿದೆ. ಗರ್ಭಗುಡಿಗೆ ಅಭಿಮುಖವಾಗಿ ಸಣ್ಣದೊಂದು ನಂದಿ ವಿಗ್ರಹವಿದ್ದು, ಅದು ದೇವಿಯನ್ನು ವೀಕ್ಷಿಸುತ್ತಾ ಕುಳಿತಿರುವಂತೆ ಭಾಸವಾಗುತ್ತದೆ. ಗರ್ಭಗುಡಿಗೆ ಮುನ್ನ ಸಿಗುವ ಅಂತರಾಳದಲ್ಲಿ ಗಣಪತಿ, ಭೈರವ ದೇವರ ಮೂರ್ತಿಗಳಿವೆ. ಭೈರವನ ಎಡಭಾಗದಲ್ಲಿ ಚಾಮುಂಡಿ ದೇವಿಯ ಪಂಚಲೋಹದ ಸುಂದರ ಉತ್ಸವ ಮೂರ್ತಿ ಇದೆ. ಗಣಪತಿಯ ಬಲಭಾಗದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ವಿಗ್ರಹವಿದ್ದು, ತಮ್ಮ ಪತ್ನಿಯರೊಂದಿಗೆ ದೇವಿಗೆ ನಮಿಸುತ್ತಿರುವಂತಿದೆ.

ಹದಿನಾಲ್ಕನೇ ಶತಮಾನದಲ್ಲಿ ಒಡೆಯರ್ ಆಳ್ವಿಕೆ ಆರಂಭವಾಗಿದ್ದು, ಯದು ವಂಶಸ್ಥರ ಕುಲದೇವತೆಯಾಗಿ, ಭಕ್ತರ ಶಕ್ತಿ ದೇವತೆಯಾಗಿದ್ದಾಳೆ. ಈಶ್ವರನ ಸತಿ ಪಾರ್ವತಿಯ ಒಂದು ಅವತಾರ ಚಾಮುಂಡಿ ಎಂದು ಪುರಾಣಗಳು ಹೇಳುತ್ತವೆ. ಸಿಂಹದ ಮೇಲೆ ಕುಳಿತಿರುವ ಚಾಮುಂಡೇಶ್ವರಿಯು ತನ್ನ ಕೈಯಲ್ಲಿರುವ ತ್ರಿಶೂಲದಿಂದ ತಿವಿದು, ಮಹಿಷಾಸುರನನ್ನು ಸಂಹಾರ ಮಾಡಿದಳು ಎಂದು ಹೇಳಲಾಗುತ್ತದೆ. ಮಹಿಷಾಸುರನು ದೇವಾನು ದೇವತೆಗಳನ್ನು ಪೀಡಿಸುತ್ತಿದ್ದ. ಈತನ ಹಿಂಸೆ, ಪೀಡನೆ ತಾಳಲಾರದೆ ಸಂಹರಿಸುವಂತೆ ಶಿವನ ಸತಿ ಪಾರ್ವತಿಯ ಮೊರೆ ಹೋಗುತ್ತಾರೆ. ಕೊನೆಗೆ ಚಾಮುಂಡಿ ಅವತಾರದಲ್ಲಿ ಬಂದು ಮಹಿಷಾಸುರನನ್ನು ಸಂಹಾರ ಮಾಡಿ, ದೇವತೆಗಳನ್ನು ರಕ್ಷಿಸಿದಳು ಎಂದು ಇತಿಹಾಸದಲ್ಲಿ ದಾಖಲಾಗಿದೆ.

### ದಸರಾಗೆ ಚಾಲನೆ

ಮೈಸೂರಿನಲ್ಲಿ ಆಚರಿಸುವ ನವರಾತ್ರಿಗೂ (ದಸರಾ), ಚಾಮುಂಡೇಶ್ವರಿ ದೇವಿಗೂ ಅವಿನಾಭಾವ ಸಂಬಂಧ. ನವರಾತ್ರಿ, ವಿಜಯದಶಮಿಯನ್ನು ವಿಶೇಷವಾಗಿ, ವಿಜೃಂಭಣೆಯಿಂದ ಈ ಭಾಗದಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ರಾಜ್ಯ ಸರ್ಕಾರ ನಾಡಹಬ್ಬವಾಗಿ ಆಚರಿಸಿಕೊಂಡು ಬಂದಿದೆ. ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಚಾಮುಂಡೇಶ್ವರಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಸೆಪ್ಟೆಂಬರ್ ತಿಂಗಳ ಕೊನೆ ಅಥವಾ ಅಕ್ಟೋಬರ್ ಆರಂಭದಲ್ಲಿ ಬರುವ ಆಶ್ವಯುಜ ಮಾಸದಲ್ಲಿ ದಸರಾ ಮಹೋತ್ಸವಕ್ಕೆ ಚಾಲನೆ ಸಿಗುತ್ತದೆ. ನವರಾತ್ರಿಯ ಒಂಬತ್ತು ದಿನಗಳೂ ಚಾಮುಂಡೇಶ್ವರಿಗೆ ವಿಶೇಷ ಪೂಜೆಗಳು ನೆರವೇರುತ್ತವೆ. ಒಂಬತ್ತು ದಿನಗಳು ಪೂಜಾ ಕೈಂಕರ್ಯಗಳು ಮುಗಿದು, ಹತ್ತನೇ ದಿನ ವಿಜಯದಶಮಿ ಕಾರ್ಯಗಳು ಪೂರ್ಣಗೊಳ್ಳುತ್ತವೆ.

ದಸರಾ ಆಚರಣೆಗೆ ಚಾರಿತ್ರಿಕ ಮಹತ್ವವನ್ನೂ ಗುರುತಿಸಬಹುದು. ವಿಜಯನಗರದ ರಾಜರು ದಸರಾ ಆಚರಿಸುತ್ತಿದ್ದರು. ಮೈಸೂರು ಅರಸರಿಗೆ ವಿಜಯನಗರ ಅರಸರಿಂದ ದಸರಾ ಆಚರಣೆ ಬಳುವಳಿಯಾಗಿ ಬಂದಿದೆ. ವಿಜಯನಗರ ಅರಸರ ನಂತರ ಮೈಸೂರು ಅರಸರ ಕಾಲದಲ್ಲಿ ಸುಮಾರು 14ನೇ ಶತಮಾನದಲ್ಲಿ ನವರಾತ್ರಿ ಆಚರಣೆ ಹೆಚ್ಚು ಮಹತ್ವ ಪಡೆದುಕೊಂಡು, ಮುನ್ನೆಲೆಗೆ ಬಂದಿದೆ. ಅಂದಿನ ಅರಸರು ಆನೆ ಮೇಲೆ ಕುಳಿತು ರಾಜಬೀದಿಯಲ್ಲಿ




# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ, ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450